ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಮಂಗಳವಾರ, ೦೭, ಜುಲೈ, ೨೦೨೬ (ಆಷಾಢ, ೧೬, ಶಕವರ್ಷ, ೧೯೪೮)	ಸಂಚಿಕೆ ೧೩೧
Volume - 161	BENGALURU, TUESDAY, 07, JULY, 2026 (ASHADHA, 16, SHAKAVARSHA, 1948)	Issue 131

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 151 ಇಎನ್‌ವಿ 2024

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 09.06.2026.

ತಿದ್ದುಪಡಿ ಆದೇಶ

ರಾಜ್ಯದಲ್ಲಿ ಕರ್ನಾಟಕ ರಾಜ್ಯ ಹವಾಮಾನ ಬದಲಾವಣೆಯ ಕ್ರಿಯಾ ಯೋಜನೆ ಆವೃತ್ತಿ-2 ಅನ್ನು ಅನುಷ್ಠಾನಗೊಳಿಸುವ ಸಂಬಂಧ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಅಪಜೀ 151 ಇಎನ್‌ವಿ 2024, ದಿನಾಂಕ: 23.03.2025 ರ ಆದೇಶ ಭಾಗದ ಎರಡನೇ ಕೋಷ್ಟಕ - ಇಲಾಖಾ ಮೌಲ್ಯಮಾಪನಾ ಸಮಿತಿ (ಡಿಇಸಿ)ಯ ರಚನೆಯಲ್ಲಿ "**ಆಯುಕ್ತರು, (ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರ)**" ಎಂಬುದರ ಬದಲಿಗೆ "**ಸರ್ಕಾರದ ಕಾರ್ಯದರ್ಶಿ-2, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್. ಆನಂದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಜೀವಿಪರಿಸ್ಥಿತಿ ಮತ್ತು ಪರಿಸರ),

PR-227

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಈ ಸಂಘಕ್ಕೆ ನೇಮಿಸಿರುವ ಆಡಳಿತಾಧಿಕಾರಿಯವರ ಅವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ :-
1. ಸರ್ಕಾರದ ಆದೇಶ ಸಂಖ್ಯೆ:ಸಿಒ 281 ಸಿಎಸ್‌ಆರ್ 2025 ಬೆಂಗಳೂರು, ದಿನಾಂಕ: 30.09.2025, 30.12.2025, 02.03.2026 ಮತ್ತು 31.03.2026.
2. ಆಡಳಿತಾಧಿಕಾರಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಸಾಪ/ವ್ಯವಿ/2025-26/169, ದಿನಾಂಕ:18.06.2026.

*****

ಪ್ರಸ್ತಾವನೆ:

ಮೇಲೆ ಓದಲಾದ (1) ರ ಆದೇಶಗಳಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು(ನೋಂದಣಿ ಸಂಖ್ಯೆ:328/1915-16), ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018, ಈ ಸಂಘಕ್ಕೆ ಶ್ರೀಮತಿ ಕೆ.ಎಂ. ಗಾಯಿತ್ರಿ, ಭಾ.ಆ.ಸೇ., ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿದ್ದು, ತದನಂತರ ದಿನಾಂಕ: 29.12.2025ರಿಂದ ಮುಂದಿನ 03 ತಿಂಗಳ ಅವಧಿಗೆ ಅಥವಾ ಕಲಂ-25ರ ವಿಚಾರಣೆ ಪೂರ್ಣಗೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಲಾಗಿತ್ತು. ನಂತರದಲ್ಲಿ, ದಿನಾಂಕ:02.03.2026ರ ಆದೇಶದಲ್ಲಿ ಆಡಳಿತಾಧಿಕಾರಿಯನ್ನು ಬದಲಿಸಿ ಶ್ರೀ ಕೆ.ಎ.ದಯಾನಂದ ಭಾ.ಆ.ಸೇ., ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಇವರನ್ನು ನೇಮಿಸಲಾಗಿದ್ದು, ದಿನಾಂಕ:31.03.2026ರ ಆದೇಶದಲ್ಲಿ ದಿನಾಂಕ:30.03.2026ರಿಂದ ಮುಂದಿನ 3 ತಿಂಗಳ ಅವಧಿಗೆ ಆಡಳಿತಾಧಿಕಾರಿಯವರ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಸಿಒ 281 ಸಿಎಸ್‌ಆರ್ 2025, ದಿನಾಂಕ:31.03.2026ರ ಆದೇಶದಲ್ಲಿ ಸಂಘದ ಆಡಳಿತಾಧಿಕಾರಿ ಅವಧಿಯನ್ನು ದಿನಾಂಕ:30-03-2026 ರಿಂದ ಮುಂದಿನ 03 ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ. ಸದರಿ ಅವಧಿಯು ದಿನಾಂಕ:29.06.2026ರಂದು ಮುಕ್ತಾಯವಾಗುವುದರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುವ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ.

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-25ರ ವಿಚಾರಣೆ ಪೂರ್ಣಗೊಂಡಿದ್ದು, ವಿಚಾರಣಾ ವರದಿಯನ್ನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಕಲಂ-25ರ ವಿಚಾರಣಾ ವರದಿಯಲ್ಲಿನ ಅಂಶಗಳು ಸಾಭೀತುಗೊಂಡಿರುವ ಹಿನ್ನೆಲೆಯಲ್ಲಿ ಕನಾಟಕ ಸಂಘಗಳ ನೋಂದಣಿ ಕಾಯ್ದೆ-1960 ಕಲಂ-26 ರಡಿಯಲ್ಲಿ ಅಧಿಬಾರ ಪ್ರಕರಣವನ್ನು ಆಡಳಿತಾಧಿಕಾರಿಗಳು ಸಕ್ಷಮ ಪ್ರಾಧಿಕಾರದಲ್ಲಿ ದಾಖಲಿಸಿರುವುದರಿಂದ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಬೈಲಾ ಸಂಖ್ಯೆ: 7(8) ಮತ್ತು 7(9)ರನ್ವಯ ಆಡಳಿತಾಧಿಕಾರಿಗಳು ಮಾಜಿ ಅಧ್ಯಕ್ಷರಿಗೆ

ಕಾರಣ ಕೇಳುವ ನೋಟೀಸು ನೀಡಿ ವಿಚಾರಣೆ ನಡೆಸುತ್ತಿರುವುದರಿಂದ ಹಾಗೂ ಕಲಂ 25ರ ವಿಚಾರಣಾ ವರದಿಯ ಮೇಲೆ ಕ್ರಮಗಳು ಜರುಗುತ್ತಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 27(ಎ)ರನ್ವಯ ಆಡಳಿತಾಧಿಕಾರಿಗಳ ಅವಧಿಯನ್ನು ದಿನಾಂಕ:30.06.2026ರಿಂದ ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಒ 281 ಸಿಎಸ್‌ಆರ್ 2025
ಬೆಂಗಳೂರು, ದಿನಾಂಕ: 01ನೇ ಜುಲೈ 2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರನ್ವಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಈ ಸಂಘದ ಆಡಳಿತಾಧಿಕಾರಿಗಳ ಅವಧಿಯನ್ನು ದಿನಾಂಕ: 30.06.2026ರಿಂದ ಮುಂದಿನ 6 ತಿಂಗಳ ವರೆಗೆ ವಿಸ್ತರಿಸಿ ಆದೇಶಿಸಿದೆ. ಆಡಳಿತಾಧಿಕಾರಿಯು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಅನುಸಾರ ಅಗತ್ಯ ಕ್ರಮವಹಿಸಿ ಸಕ್ಷಮ ಪ್ರಾಧಿಕಾರಿ ಮತ್ತು ಸರ್ಕಾರಕ್ಕೆ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-228

<u>ಕರ್ನಾಟಕ ಸರ್ಕಾರದ ನಡಾವಳಿಗಳು</u>

ವಿಷಯ: ಗೃಹ ಜ್ಯೋತಿ ಯೋಜನೆಯಡಿ ನೊಂದಣಿಗೊಳಿಸಿರುವ ಮಾಹಿತಿಯನ್ನು ಪರಿಶೀಲಿಸಲು ಹೆಚ್ಚುವರಿ ಮಾಹಿತಿಯನ್ನು ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಸಂಗ್ರಹಿಸಿ ಇಂಧೀಕರಿಸುವ / ದಾಖಲಿಸುವ ಬಗ್ಗೆ.

<u>ಓದಲಾಗಿದೆ:</u>

1. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/154/ಪಿಎಸ್‌ಆರ್/2023 ದಿನಾಂಕ: 20.05.2023.
2. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್‌ಆರ್/2023 ದಿನಾಂಕ: 05.06.2023.
3. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್‌ಆರ್/2023 ದಿನಾಂಕ: 15.06.2023.
4. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/208/ಪಿಎಸ್‌ಆರ್/2023 ದಿನಾಂಕ: 17.07.2023.
5. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್‌ಆರ್/2023 ದಿನಾಂಕ: 29.01.2024.
6. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಪತ್ರ ಸಂಖ್ಯೆ: ಮುಕಾ/12642192/2026 ದಿನಾಂಕ: 06.06.2026.

<u>ಪ್ರಸ್ತಾವನೆ</u>

1. ಕರ್ನಾಟಕ ರಾಜ್ಯದಲ್ಲಿ ಗೃಹ ಬಳಕೆ ವಿದ್ಯುಚ್ಛಕ್ತಿಯನ್ನು ಉಚಿತವಾಗಿ ಒದಗಿಸಲು ದಿನಾಂಕ: 20.05.2023 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರವು ತೀರ್ಮಾನಿಸಿ

ಅನುಮೋದಿಸಿರುವಂತೆ "ಗೃಹ ಜ್ಯೋತಿ" ಯೋಜನೆಯನ್ನು ದಿನಾಂಕ: 01.07.2023 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿರುತ್ತದೆ. ಮುಂದುವರೆದು, ದಿನಾಂಕ: 13.07.2023 ರಂದು ನಡೆದ ಸಂಪುಟ ಸಭೆಯ ನಡವಳಿಯಂತೆ ಭಾಗ್ಯಜ್ಯೋತಿ / ಕುಟೀರಜ್ಯೋತಿ ಮತ್ತು ಅಮೃತ ಜ್ಯೋತಿ ಸ್ಥಾವರಗಳನ್ನು ಗೃಹಜ್ಯೋತಿ ಯೋಜನೆಗೆ ಸೇರ್ಪಡೆಗೊಳಿಸಲಾಗಿರುತ್ತದೆ. ದಿನಾಂಕ: 18.01.2024 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಮಾಸಿಕ 48 ಯೂನಿಟ್‌ಗಳಿಗೂ ಕಡಿಮೆ ಬಳಸುತ್ತಿರುವ ಸ್ಥಾವರಗಳಿಗೆ ಶೇಕಡ 10 ರ ಬದಲಾಗಿ 10 ಯೂನಿಟ್ ಗಳನ್ನು ಸೇರಿಸಿ ಮಾಸಿಕ ಅರ್ಹತಾ ಯೂನಿಟ್‌ಗಳನ್ನು ನಿಗಧಿಪಡಿಸಲು ಆದೇಶಿಸಲಾಗಿರುತ್ತದೆ.

2. ಗೃಹಜ್ಯೋತಿ ಯೋಜನೆಯಡಿ ರಾಜ್ಯದಲ್ಲಿನ ಪ್ರತಿ ಗೃಹ ಬಳಕೆ ವಿದ್ಯುತ್ ಸ್ಥಾವರಗಳಿಗೆ ಮಾಸಿಕ ಗರಿಷ್ಠ 200 ಯೂನಿಟ್‌ಗಳವರೆಗಿನ ಬಳಕೆಯ ಮಿತಿಯಲ್ಲಿ 2022-23 ರ ವಾರ್ಷಿಕ ಸರಾಸರಿ ಬಳಕೆಯನ್ನು ಪರಿಗಣಿಸಿ ಸದರಿ ಬಳಕೆಯ ಮೇಲೆ ಶೇ.10ರಷ್ಟು ಹೆಚ್ಚಿನ ಮಿತಿಯನ್ನು ಅನುಮತಿಸಿ ಮಾಸಿಕ ಅರ್ಹದಾಯಕ ಯೂನಿಟ್‌ಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿಯಂತೆ ನಿಗಧಿಪಡಿಸಲಾಗಿರುವ ಮಾಸಿಕ ಅರ್ಹದಾಯಕ ಯೂನಿಟ್‌ವರೆಗಿನ ಮಾಸಿಕ ಬಳಕೆಯ ವಿದ್ಯುತ್ ಬಿಲ್ಲನ್ನು ಸರ್ಕಾರದ ವತಿಯಿಂದ ಪಾವತಿಸುವ ಬಗ್ಗೆ ಹಾಗೂ ಮಾಸಿಕ ಬಳಕೆಯನ್ನು ಮೀರಿದ 200 ಯೂನಿಟ್‌ವರೆಗಿನ ಬಳಕೆಯ ವಿದ್ಯುತ್ ಬಿಲ್ಲನ್ನು ಗ್ರಾಹಕರು ಪಾವತಿಸುವ ಹಾಗೂ ಮಾಸಿಕ 200 ಯೂನಿಟ್‌ಗಳು ಮೀರಿದ ವಿದ್ಯುತ್ ಬಿಲ್ಲನ್ನು ಪೂರ್ಣವಾಗಿ ಗ್ರಾಹಕರು ಪಾವತಿಸಬೇಕಾಗಿರುತ್ತದೆ.

3. ಗೃಹ ಜ್ಯೋತಿ ಯೋಜನೆಯ ಸೌಲಭ್ಯವನ್ನು ಪಡೆಯಲು ಪ್ರಸ್ತುತ ಸೇವಾಸಿಂಧು ತಂತ್ರಾಂಶದಲ್ಲಿ ಈ ಕೆಳಕಂಡ ಮಾಹಿತಿಯೊಂದಿಗೆ ನೊಂದಣಿಗೊಳಿಸಲಾಗುತ್ತಿದೆ.

1.	ವಿದ್ಯುತ್ ಸರಬರಾಜು ಕಂಪನಿ ಹೆಸರು	ESCOM Name.
2.	ಖಾತೆ ಸಂಖ್ಯೆ / ಸಂಪರ್ಕ ಸಂಖ್ಯೆ	Account ID / Connection ID.
3.	ವಿದ್ಯುತ್ ಸ್ಥಾವರದ ನೊಂದಾಯಿತ ಹೆಸರು	Account holder Name as in ESCOM.
4.	ವಿದ್ಯುತ್ ಸ್ಥಾವರದ ವಿಳಾಸ	Account holder address as per ESCOM.
5.	ಮಾಲೀಕ / ಬಾಡಿಗೆದಾರ	Type of Occupancy.
6.	ಆಧಾರ್ ಸಂಖ್ಯೆ	Aadhar Number.
7.	ಆಧಾರ್ ಕಾರ್ಡ್‌ನಲ್ಲಿನ ಹೆಸರು	Applicant Name as in Aadhar.
8.	ಸಂಪರ್ಕ ಮೊಬೈಲ್ ಸಂಖ್ಯೆ	Mobile number for communication.

4. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 04.06.2026 ರಂದು ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳೊಂದಿಗೆ ನಡೆದ ಸಭೆಯಲ್ಲಿ ವಿವಿಧ ಇಲಾಖೆಗಳ ವತಿಯಿಂದ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಗೃಹಜ್ಯೋತಿ ಯೋಜನೆಯಡಿ ಸಹಾಯಧನವು ಗೃಹ ಬಳಕೆ ವಿದ್ಯುತ್ ಸ್ಥಾವರಗಳ ಕಂದಾಯ ಖಾತೆಗೆ ಜಮೆಗೊಳ್ಳುವ ಪ್ರಕ್ರಿಯೆ ಅನುಸರಿಸುತ್ತಿರುವ ಹಿನ್ನಲೆಯಲ್ಲಿ ಆಧಾರ ಸಂಖ್ಯೆಯೊಂದಿಗೆ ನೊಂದಣಿಗೊಳಿಸಿರುವ ಮಾಲೀಕರು ಹಾಗೂ ಬಾಡಿಗೆದಾರರು ಮೃತಪಟ್ಟಿರುವ, ಬಾಡಿಗೆದಾರರು ಮನೆ ಬದಲಾವಣೆಗೊಳಿಸಿರುವ, ಮನೆ ಖರೀದಿ, ಮಾರಾಟ ಮತ್ತು ಇತರೆ ಸಂದರ್ಭಗಳಲ್ಲಿ ನೊಂದಣಿದಾರ ಪ್ರಕರಣವಾರು ಪರಿಷ್ಕರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

5. ಈ ಮೇರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಟಿಪ್ಪಣಿ ಸಂಖ್ಯೆ: ಮುಕಾ/12642192/2026 ದಿನಾಂಕ: 06.06.2026 ರಲ್ಲಿ ದಿನಾಂಕ: 04.06.2026 ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗೃಹ ಜ್ಯೋತಿ ಯೋಜನೆಯ ಪ್ರಯೋಜನಗಳು ಜೀವಂತ

ಫಲಾನುಭವಿಗಳಿಗೆ ಮಾತ್ರ ತಲುಪುವಂತೆ ಖಚಿತಪಡಿಸಿಕೊಳ್ಳಲು ಮಾನ್ಯ ಮುಖ್ಯ ಮಂತ್ರಿಯವರು ಸೂಚಿಸಿರುವ ಹಿನ್ನಲೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ.

6. ಸದರಿ ಮೇರೆಗೆ ಗೃಹಜ್ಯೋತಿ ಯೋಜನೆಯ ಸೌಲಭ್ಯ ಪಡೆಯಲು ಪ್ರಸ್ತುತವಾಗಿ ಅಗತ್ಯವಾಗಿರುವ ಮಾಹಿತಿಗಳಾದ ಗೃಹಬಳಕೆ ಸ್ಥಾವರದ ಖಾತೆ ಸಂಖ್ಯೆ, ಆಧಾರ್ ಸಂಖ್ಯೆ, ಆಧಾರ್ ಕಾರ್ಡ್‌ನಲ್ಲಿನ ಹೆಸರು ಮತ್ತು ಸಂಪರ್ಕ ಮೊಬೈಲ್ ಸಂಖ್ಯೆ, ಮಾಲೀಕ ಮತ್ತು ಬಾಡಿಗೆದಾರರಾಗಿರುವ ಬಗ್ಗೆ ಮಾತ್ರ ನೊಂದಣಿಗೊಳಿಸಲಾಗುತ್ತಿದ್ದು, ಗೃಹ ಜ್ಯೋತಿ ಯೋಜನೆಯಡಿ ನೊಂದಣಿಗೊಳಿಸಿರುವ ಮಾಹಿತಿಯನ್ನು ಪರಿಶೀಲಿಸಲು ಈ ಕೆಳಕಂಡ ಹೆಚ್ಚುವರಿ ಮಾಹಿತಿಯನ್ನು ವಿದ್ಯುತ್ ಸರಬರಾಜು ಕಂಪನಿಯ ಸಿಬ್ಬಂದಿಯವರು ಪ್ರತಿ ಗೃಹಜ್ಯೋತಿ ಸ್ಥಾವರಕ್ಕೆ ಭೇಟಿ ನೀಡಿ ಮಾಲಿಕ / ಬಾಡಿಗೆದಾರರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೆಚ್ಚುವರಿ ಮಾಹಿತಿಯನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸುವ / ದಾಖಲಿಸುವ ಬಗ್ಗೆ ನಿರ್ಧರಿಸಲಾಗಿರುತ್ತದೆ.

1.	ಪಡಿತರ ಚೀಟಿ (ಎಪಿಎಲ್ / ಬಿಪಿಎಲ್ / ಯಾವುದು ಇಲ್ಲ).	Ration Card (APL / BPL / No Ration Card)
	ಬಿಪಿಎಲ್ ಹೌದಾದಲ್ಲಿ - ಬಿಪಿಎಲ್ ಕಾರ್ಡ್ ಸಂಖ್ಯೆ	If BPL-BPL Card No.
2.	ಕರ್ನಾಟಕ ರಾಜ್ಯದ ನೊಂದಾಯಿತ ಮತದಾರರ ಬಗ್ಗೆ (ಹೌದು / ಇಲ್ಲ)	Registered Voter of Karnataka (Yes/No)
	ಕರ್ನಾಟಕ ಮತದಾರರಾದಲ್ಲಿ – EPIC ಸಂಖ್ಯೆ	If Yes – EPIC No.
3.	ಅರ್ಜಿದಾರರ ಭಾವಚಿತ್ರ	Photo of the Applicant
4.	ಅರ್ಜಿದಾರರ ಪ್ರವರ್ಗ (ಎಸ್‌ಸಿ / ಎಸ್‌ಟಿ / ಒಬಿಸಿ / ಅಲ್ಪಸಂಖ್ಯಾತ / ಇತರೆ)	Beneficiaries Category (SC / ST / OBC / Minorities / Others)
5.	ಆದಾಯ ತೆರಿಗೆ ಪಾವತಿದಾರರೇ (ಹೌದು / ಇಲ್ಲ).	Income Tax Payer (Yes / No)
	ಆದಾಯ ತೆರಿಗೆ ಪಾವತಿದಾರರಾದಲ್ಲಿ – PAN ಸಂಖ್ಯೆ	If Yes – PAN No.
6.	ವೃತ್ತಿ (ಸರ್ಕಾರಿ / ಖಾಸಗಿ / ವ್ಯಾಪರ / ಕೂಲಿ ಕಾರ್ಮಿಕ ಮತ್ತು ಇತ್ಯಾದಿ)	Profession (Government / Private / Business / Farmer / Labour & etc.)

ಆದ್ದರಿಂದ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ/139/ಪಿಎಸ್‌ಆರ್/2026</u>
<u>ಬೆಂಗಳೂರು, ದಿನಾಂಕ: 30.06.2026</u>

1. ಗೃಹ ಜ್ಯೋತಿ ಯೋಜನೆಗೆ ಈಗಾಗಲೇ ನೊಂದಣಿಗೊಳಿಸಿರುವ ಸ್ಥಾವರಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ (ಮಾಪಕ ಓದುಗ / ಇತರೆ ಸಿಬ್ಬಂದಿ) ಯವರು ಸದರಿ ಗೃಹಜ್ಯೋತಿ ಸ್ಥಾವರಗಳಿಗೆ ಭೇಟಿ ನೀಡಿ ಮಾಲಿಕ / ಬಾಡಿಗೆದಾರರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೆಚ್ಚುವರಿ ಮಾಹಿತಿಯ ಅಗತ್ಯ ದಾಖಲಾತಿಗಳನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸುವುದು.

1.	ಪಡಿತರ ಚೀಟಿ (ಎಪಿಎಲ್ / ಬಿಪಿಎಲ್ / ಯಾವುದು ಇಲ್ಲ).	Ration Card (APL / BPL / No Ration Card)
	ಬಿಪಿಎಲ್ ಹೌದಾದಲ್ಲಿ - ಬಿಪಿಎಲ್ ಕಾರ್ಡ್ ಸಂಖ್ಯೆ	If BPL-BPL Card No.
2.	ಕರ್ನಾಟಕ ರಾಜ್ಯದ ನೊಂದಾಯಿತ ಮತದಾರರ ಬಗ್ಗೆ (ಹೌದು / ಇಲ್ಲ)	Registered Voter of Karnataka (Yes/No)
	ಕರ್ನಾಟಕ ಮತದಾರರಾದಲ್ಲಿ – EPIC ಸಂಖ್ಯೆ	If Yes – EPIC No.

3.	ಅರ್ಜಿದಾರರ ಭಾವಚಿತ್ರ	Photo of the Applicant
4.	ಅರ್ಜಿದಾರರ ಪ್ರವರ್ಗ (ಎಸ್‌ಸಿ / ಎಸ್‌ಟಿ / ಒಬಿಸಿ / ಅಲ್ಪಸಂಖ್ಯಾತ / ಇತರೆ)	Beneficiaries Category (SC / ST / OBC / Minorities / Others)
5.	ಆದಾಯ ತೆರಿಗೆ ಪಾವತಿದಾರರೇ (ಹೌದು / ಇಲ್ಲ).	Income Tax Payer (Yes / No)
	ಆದಾಯ ತೆರಿಗೆ ಪಾವತಿದಾರರಾದಲ್ಲಿ – PAN ಸಂಖ್ಯೆ	If Yes – PAN No.
6.	ವೃತ್ತಿ (ಸರ್ಕಾರಿ / ಖಾಸಗಿ / ವ್ಯಾಪಾರ / ಕೂಲಿ ಕಾರ್ಮಿಕ ಮತ್ತು ಇತ್ಯಾದಿ)	Profession (Government / Private / Business / Farmer / Labour & etc.)

2. ಗೃಹಜ್ಯೋತಿ ಸ್ಥಾವರದ ಮಾಲೀಕ / ಬಾಡಿಗೆದಾರರು ಹೆಚ್ಚುವರಿ ಮಾಹಿತಿ ನೀಡಿರುವ ಬಗ್ಗೆ ಮಾಲೀಕ / ಬಾಡಿಗೆದಾರರಿಂದ ದೃಢೀಕರಣ ಪಡೆಯುವುದು.

3. ಗೃಹಜ್ಯೋತಿ ಸ್ಥಾವರಗಳ ಹೆಚ್ಚುವರಿ ಮಾಹಿತಿ ಸಂಗ್ರಹಣೆ ಕಾರ್ಯವನ್ನು ದಿನಾಂಕ: 01.07.2026 ರಿಂದ ಜಾರಿಗೆ ಬರುವಂತೆ ಕೈಗೆತ್ತಿಕೊಳ್ಳುವುದು. ಸದರಿ ಪ್ರಕ್ರಿಯೆಯನ್ನು ಎರಡು ತಿಂಗಳೊಳಗಾಗಿ ಪೂರ್ಣಗೊಳಿಸುವುದು.

4. ಮೇಲಿನ ಪ್ರಕ್ರಿಯೆಗೆ ಅಗತ್ಯವಾಗಿರುವ ಗೌರವಧನ ಮತ್ತು Internet Data Charges ಒಳಗೊಂಡಂತೆ ಇತರೆ ವೆಚ್ಚಗಳನ್ನು ಪಾವತಿಸುವ ಬಗ್ಗೆ ಕಂಪನಿಗಳ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳುವುದು.

5. ವಿದ್ಯುತ್ ಸರಬರಾಜು ಕಂಪನಿಗಳು ಗೃಹಜ್ಯೋತಿ ಯೋಜನೆಯ ಹೆಚ್ಚುವರಿ ಮಾಹಿತಿಯನ್ನು ಪಡೆದು ಇಂಧೀಕರಿಸುವ / ದಾಖಲಿಸಿರುವ ದೈನಂದಿನ ಪ್ರಗತಿಯ ಮಾಹಿತಿಯನ್ನು ಸರ್ಕಾರಕ್ಕೆ ನೀಡುವುದು.

ಉಳಿದಂತೆ ಗೃಹಜ್ಯೋತಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದಿಂದ ಹೊರಡಿಸಿರುವ ಎಲ್ಲಾ ಆದೇಶ / ಸುತ್ತೋಲೆಗಳಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

PR-229

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಲಬುರಗಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ PM-MITRA ಜವಳಿ ಪಾರ್ಕ್ ಸ್ಥಾಪನೆಗೆ ಪ್ರಸ್ತುತ ಸಾರ್ವಜನಿಕ–ಖಾಸಗಿ ಸಹಹಭಾಗಿತ್ವದ (ಪಿಪಿಪಿ) ಮಾದರಿಯಿಂದ ಬದಲಾವಣೆ ಮಾಡಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರ ಸಂಪನ್ಮೂಲದಿಂದ ಅಭಿವೃದ್ಧಿಪಡಿಸಲು ಅನುಮೋದನೆ ನೀಡುವ ಕುರಿತು.

ಓದಲಾಗಿದೆ:

1. 2021–22ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ.
2. ಇಂಧನ ಇಲಾಖೆಯ ಆದೇಶ ಸಂಖ್ಯೆ:ಎನರ್ಜಿ 210 ಇಇಬಿ 2022, ದಿನಾಂಕ:03–08–2022.
3. ಕೇಂದ್ರ ಸರ್ಕಾರದ ಪತ್ರ ದಿನಾಂಕ:25–08–2023.
4. ಸರ್ಕಾರದ ಆದೇಶ ಸಂಖ್ಯೆ: CI 34 JAKY 2023, ದಿನಾಂಕ:19–12–2023.
5. ಸರ್ಕಾರದ ಆದೇಶ ಸಂಖ್ಯೆ: CI 170 JAKE 2019 (P-5), ದಿನಾಂಕ: 03–10–2024.
6. ದಿನಾಂಕ:03–02–2026 ರಂದು ಮಾನ್ಯ ಮುಖ್ಯಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ಜರುಗಿದ PM MITRA Textile Park ನ ಸದರಿ ಪ್ರಗತಿ ಪರಿಶೀಲನೆ ಸಭೆಯ ನಡವಳಿ.
7. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: CS/425/2026, ದಿನಾಂಕ:02–06–2026.
8. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಪತ್ರ ಸಂಖ್ಯೆ: ಕೈಜಇ/ ನೂಜ&ಸಿನೀ/ ಉನಿ(ಬಂ)/ PM-MITRA/KIADB/2025-26, ದಿನಾಂಕ:04–03–2026.
9. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರ ಟಿಪ್ಪಣಿ ಸಂಖ್ಯೆ: CI 293 IAP 2026, ದಿನಾಂಕ:19–06–2026.

****

ಪ್ರಸ್ತಾವನೆ:

ಮೇಲೆ ಓದಲಾದ(1)ರಲ್ಲಿ ಕೇಂದ್ರ ಸರ್ಕಾರದ 2021–22ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ದೇಶದಾದ್ಯಂತ 07 Prime Minister- Mega Integrated Textile Region and Apparel Park (PM-MITRA) ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ(2)ರಲ್ಲಿ ಕಲಬುರಗಿ ಜಿಲ್ಲೆಯ, ಕಲಬುರಗಿ ತಾಲ್ಲೂಕಿನ, ನದಿಸಿನ್ನೂರು ಮತ್ತು ಕಿರಣಗಿ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿರುವ 1000 ಎಕರೆ ಜಮೀನನ್ನು PM-MITRA PARK ಯೋಜನೆಯಡಿ ಜವಳಿ ಪಾರ್ಕ್‌ನ್ನು ಸ್ಥಾಪಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಗೆ ವರ್ಗಾಯಿಸಿ ಆದೇಶಿಸಿರುತ್ತಾರೆ.

ಮೇಲೆ ಓದಲಾದ(3)ರಲ್ಲಿ ಕಲಬುರಗಿಯಲ್ಲಿ PM-MITRA ಯೋಜನೆಯಡಿ ಜವಳಿ ಪಾರ್ಕ್ ಸ್ಥಾಪಿಸಲು ಒಡಂಬಡಿಕೆ (MOU) ಮಾಡಿಕೊಳ್ಳಲಾಗಿದ್ದು, ದಿನಾಂಕ:25.08.2023ರ ಕೇಂದ್ರ ಸರ್ಕಾರದ ಪತ್ರದಲ್ಲಿ ಉದ್ದೇಶಿತ ಮೆಗಾ ಜವಳಿ ಪಾರ್ಕ್ Greenfield Category ಗೆ ಒಳಪಡುತ್ತದೆ ಎಂದು ತಿಳಿಸಿರುತ್ತದೆ.

ಮೇಲೆ ಓದಲಾದ(4)ರಲ್ಲಿ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಿ 546/2023 ರಲ್ಲಿ ಕಲಬುರಗಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ PM-MITRA PARK ಯೋಜನೆಯಡಿ ಜವಳಿ ಪಾರ್ಕ್ ಸ್ಥಾಪನೆಗೆ ಜಂಟಿ ಸಹಭಾಗಿತ್ವ ಒಪ್ಪಂದಕ್ಕೆ (Joint Venture Agreement) ಮತ್ತು Special Purpose Vehicle (SPV) ರಚಿಸಲು ಅನುಮೋದನೆ ನೀಡಲಾಗಿರುತ್ತದೆ.

ರಾಜ್ಯ ಸರ್ಕಾರದ 2024–25ನೇ ಸಾಲಿನ ಆಯವ್ಯಯ ಕಂಡಿಕೆ–329 ರಲ್ಲಿ "ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ಜಿಲ್ಲೆಯ 1,000 ಎಕರೆ ಪ್ರದೇಶದಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ಮೆಗಾ ಟೆಕ್ಸ್ ಟೈಲ್ ಪಾರ್ಕ್ ನ್ನು ಸ್ಥಾಪಿಸಲಾಗುತ್ತಿದೆ. ಇದರಿಂದ 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಜನೆಯಾಗುವ ನಿರೀಕ್ಷೆಯಿದೆ. ಈ ಯೋಜನೆಗೆ ಪೂರಕವಾದ ಮೂಲ ಸೌಕರ್ಯಕ್ಕಾಗಿ 50 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು" ಎಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ(5)ರಲ್ಲಿ ಕಲಬುರಗಿಯಲ್ಲಿ PM-MITRA Park ಯೋಜನೆಯಡಿ ಸ್ಥಾಪಿಸಲಾಗುವ ಜವಳಿ ಪಾರ್ಕ್‌ಗೆ ನೀರು ಸರಬರಾಜು ಮಾಡಲು ಪೈಪ್‌ಲೈನ್ ಮತ್ತು ಇತರೆ ಕಾಮಗಾರಿಗಳಿಗೆ, ಮದ್ರಿ ಗ್ರಾಮದ ಬಳಿ ಭೀಮಾ ನದಿಗೆ ಅಣೆಕಟ್ಟು ನಿರ್ಮಿಸಲು, ಯೋಜನಾ ಪ್ರದೇಶದ ಪಾರ್ಕ್ ಗೇಟ್ ವರೆಗೆ ವಿದ್ಯುತ್ ಸರಬರಾಜು ಮಾಡಲು ಹಾಗೂ ಯೋಜನಾ ಪ್ರದೇಶದಿಂದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:50 ಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ನಿರ್ಮಾಣದ ಕಾಮಗಾರಿಗಳಿಗೆ ಒಟ್ಟು ಮೊತ್ತ ರೂ.390.26 ಕೋಟಿಗಳ ಅನುದಾನ ನೀಡಿ KKRDB ಮತ್ತು ರಾಜ್ಯ ಸರ್ಕಾರದ ಆಯವ್ಯಯದಿಂದ ಭರಿಸತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ(6)ರಲ್ಲಿ ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿರುವ PM-MITRA Park ಸ್ಪರ್ಧಾತ್ಮಕ ದರದಲ್ಲಿ ಹಾಗೂ ತ್ವರಿತವಾಗಿ ಅಭಿವೃದ್ಧಿಪಡಿಸಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರಿಂದ ಹಾಲಿ ಜವಳಿ ಪಾರ್ಕ್‌ನಲ್ಲಿ ಒದಗಿಸಲು ಪ್ರಸ್ತಾಪಿಸಿರುವ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸಲು ತಗಲುವ ಅಂದಾಜು ವಿವರಗಳ ಪ್ರಸ್ತಾವನೆಯನ್ನು ಪಡೆದು ವಿವರಗಳನ್ನು ಪರಿಶೀಲಿಸಿ, PM-MITRA Park ನ್ನು ಖಾಸಗಿ ಪಾಲುದಾರರ ಅಭಿವೃದ್ಧಿಪಡಿಸುವ ಹಾಲಿ ಪ್ರಸ್ತಾವನೆಯೊಂದಿಗೆ ಹೋಲಿಕೆ ಮಾಡಿ ನಂತರ ಸಚಿವ ಸಂಪುಟದ ತೀರ್ಮಾನಕ್ಕೆ ಪ್ರಸ್ತಾಪಿಸಲು ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ(7)ರಲ್ಲಿ ಕಲಬುರಗಿಯಲ್ಲಿ ಸ್ಥಾಪಿಸಲಾಗುತ್ತಿರುವ PM MITRA ಜವಳಿ ಪಾರ್ಕ್‌ನ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಈ ಹಿಂದೆ ಪ್ರಸ್ತಾಪಿಸಲಾಗಿದ್ದ PPP ಮಾದರಿಯ Master Developer ರಿಂದ State Infrastructure Development Corporation (IDC) ಅಂದರೆ, ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ವತಿಯಿಂದ ಅಭಿವೃದ್ಧಿಪಡಿಸಲು ಬದಲಾವಣೆಗೆ In principle Approval ನೀಡಲು ಕೋರಿ ಕಾರ್ಯದರ್ಶಿಗಳು(ಜವಳಿ), ಜವಳಿ ಮಂತ್ರಾಲಯ ಭಾರತ ಸರ್ಕಾರ, ನವದೆಹಲಿ ರವರನ್ನು ಕೋರಲಾಗಿರುತ್ತದೆ.

ಮೇಲೆ ಓದಲಾದ(8)ರಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಯಡಿ Master Developer (MD) ಮೂಲಕ PM-MITRA ಪಾರ್ಕ್ ಅಭಿವೃದ್ಧಿಪಡಿಸಲು ಅನುಮೋದನೆಯಾಗಿದ್ದು, ಪ್ರಸ್ತುತ ಸದರಿ ಮಾದರಿಯಿಂದ ರಾಜ್ಯ ಮೂಲಭೂತ ಸೌಲಭ್ಯ ಮಂಡಳಿಯಾದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ವತಿಯಿಂದ ಅಭಿವೃದ್ಧಿಪಡಿಸಿ ಸದರಿ ಪಾರ್ಕ್‌ನ್ನು ಸ್ಥಾಪಿಸಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ(9) ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರು ಸದರಿ ಪಾರ್ಕ್ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿರುವ ಅಭಿವೃದ್ಧಿ ಯೋಜನಾ ಮೊತ್ತ ರೂ.1700.00 ಕೋಟಿಗಳಿಗೆ. ವಿವರವಾದ ಯೋಜನಾ ವರದಿಯನ್ನು (DPR) ಸಲ್ಲಿಸುತ್ತಾ, ಸದರಿ ಜವಳಿ ಪಾರ್ಕ್‌ನ್ನು ಎರಡು ಹಂತದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತಾರೆ ಹಾಗೂ ಮೊದಲನೇ ಹಂತದಲ್ಲಿ ರೂ.320.00 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: CI 170 JAKE 2019(P-7) ಬೆಂಗಳೂರು, ದಿನಾಂಕ:04–07–2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಲಬುರಗಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ PM-MITRA ಜವಳಿ ಪಾರ್ಕ್ ಸ್ಥಾಪನೆಗೆ ಪ್ರಸ್ತುತ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಿಂದ ಬದಲಾವಣೆ ಮಾಡಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರ ಸಂಪನ್ಮೂಲದಿಂದ ಅಭಿವೃದ್ಧಿಪಡಿಸಲು ಈ ಕೆಳಕಂಡ ಅಂಶಗಳಿಗೆ ಸರ್ಕಾರದ ಅನುಮೋದನೆ ನೀಡಿದೆ.

ಅ) PM-MITRA ಜವಳಿ ಪಾರ್ಕ್ ಸ್ಥಾಪನೆಗೆ ಕಲಬುರಗಿ ಜಿಲ್ಲೆಯಲ್ಲಿ 1000 ಎಕರೆ ಪ್ರದೇಶದ ಬೃಹತ್ ಪ್ರಮಾಣದಲ್ಲಿ ಜವಳಿ ಮೌಲ್ಯ ಸರಣಿಯ ಎಲ್ಲಾ ಚಟುವಟಿಕೆಗಳನ್ನು ಒಂದೇ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತುತ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಿಂದ ಬದಲಾವಣೆ ಮಾಡಿ State Infrastructure Development Corporation (IDC) ಕರ್ನಾಟಕ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ವತಿಯಿಂದ ಅಭಿವೃದ್ಧಿಪಡಿಸಲು,

ಆ) ಸದರಿ PM-MITRA ಜವಳಿ ಪಾರ್ಕ್‌ನ್ನು ಎರಡು ಹಂತಗಳಲ್ಲಿ ಒಟ್ಟು ಅಂದಾಜು ಯೋಜನಾ ಮೊತ್ತ ರೂ.1700 ಕೋಟಿಗಳಲ್ಲಿ ಅಭಿವೃದ್ಧಿಪಡಿಸಲು,

ಇ) ಸದರಿ ಜವಳಿ ಪಾರ್ಕ್‌ನ ಮೂಲ ಭೂತ ಸೌಕರ್ಯಗಳಾದ PM MITRA Park-Ground development of 1000 acres, formation of roads, construction of RCC drains, sewage/effluent line network, HT/LT distribution lines (open duct), LED street lights, 2.5 MLD CETP, 20,000 sq.mtr. plug & play PEB structure, internal water supply and GLSR ಇವುಗಳನ್ನು ರೂ.320.00 ಕೋಟಿ ವೆಚ್ಚದಲ್ಲಿ ಮೊದಲನೇ ಹಂತದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (KIADB) ರವರ ಆಂತರಿಕ ಸಂಪನ್ಮೂಲದಿಂದ ಭರಿಸಿ ಅಭಿವೃದ್ಧಿಪಡಿಸುವುದು.

ಕಲಬುರಗಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ PM-MITRA ಜವಳಿ ಪಾರ್ಕ್ ಸ್ಥಾಪನೆ ಕುರಿತಂತೆ KIADB ರವರೊಂದಿಗೆ ಸಮನ್ವಯ ಸಾಧಿಸಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹಾಗೂ ಉತ್ತಮ ಗುಣಮಟ್ಟದ ಸೇವೆಯನ್ನು ಪಡೆಯಲು ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ರವರು ದೃಢಪಡಿಸಿಕೊಳ್ಳುವುದು.

ಈ ಆದೇಶವನ್ನು ದಿನಾಂಕ:02–07–2026 ರಂದು ನಡೆದ ಸಚಿವ ಸಂಪುಟ ಸಭೆಯ ಪ್ರಕರಣ ಸಂಖ್ಯೆ: ಸಿ349/2026 ರ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜೇಮ್ಸ್ ತರಕನ್)
ಸರ್ಕಾರದ ಉಪ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಜವಳಿ)

PR-230

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ರ ಭೂಸ್ವಾಧೀನ ಪ್ರಕ್ರಿಯೆಯನ್ನು ಒಂದೇ ಹಂತದಲ್ಲಿ ತ್ವರಿತವಾಗಿ ಕೈಗೊಳ್ಳುವ ಕುರಿತಂತೆ, ಒಪ್ಪಂದದ ಐತೀರ್ಪು ರಚಿಸಲು ಏಕರೂಪ ದರ ನಿಗಧಿಪಡಿಸಲು ಹಾಗೂ ಸಂಬಂಧಿಸಿದ ಇನ್ನಿತರೆ ಆಡಳಿತಾತ್ಮಕ ವಿಷಯಗಳಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಜಸಂಇ 209 ಕೆಬಿಎನ್ 2016, ದಿನಾಂಕ: 09.10.2017.
2) ಸರ್ಕಾರದ ಆದೇಶ ಸಂಖ್ಯೆ: ಕಂಇ 24 ಎಕ್ಯೂಎ 2022, ದಿನಾಂಕ: 25.01.2023.
3) ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ವ್ಯ.ನಿ/154/UKP-3 Rivised DPR/ತಾಂತ್ರಿಕ/2024-25/3618, ದಿನಾಂಕ:05.02.2025.
4) ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ಇವರ ಪತ್ರ ಸಂಖ್ಯೆ: ವ್ಯ.ನಿ/ಕೃಭಾಜನಿನಿ/ತಾ-3/UKP-3 Rivised DPR/28/2024-25/3730, ದಿನಾಂಕ: 15.02.2025.
5) ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ಇವರ ಪತ್ರ ಸಂಖ್ಯೆ: ವ್ಯ.ನಿ/ಕೃಭಾಜನಿನಿ/ತಾ-3/UKP-3 Rivised DPR/28/2024-25/3976, ದಿನಾಂಕ: 05.03.2025.

*****

ಪ್ರಸ್ತಾವನೆ :

ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ-II (KWDT-II) ದಿನಾಂಕ:30.12.2010ರಲ್ಲಿ ತೀರ್ಪು ನೀಡಿರುತ್ತದೆ. ದಿನಾಂಕ:29.11.2013 ರಂದು ಮುಂದುವರೆದ ವರದಿಯಲ್ಲಿ ಕರ್ನಾಟಕ ರಾಜ್ಯಕ್ಕೆ 173 ಟಿ.ಎಂ.ಸಿ. ನೀರು ಹಂಚಿಕೆ ಮಾಡಿರುತ್ತದೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ (ಕೃ.ಮೇ.ಯೋ.) ಯೋಜನೆಗೆ 130 ಟಿ.ಎಂ.ಸಿ ನೀರು ಹಂಚಿಕೆ ನಿಗದಿಪಡಿಸಿದ್ದು, ನೀರಿನ ಬಳಕೆಯು ಆಲಮಟ್ಟಿ ಜಲಾಶಯದ ಸಂಗ್ರಹಣಾ ಮಟ್ಟವನ್ನು RL:519.60 ಮೀ. ನಿಂದ RL:524.256 ಮೀ. ವರೆಗೆ ಎತ್ತರಗೊಳಿಸುವುದನ್ನು ಒಳಗೊಂಡಿರುತ್ತದೆ. KWDT-II ರ ತೀರ್ಪಿಗೆ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸುವುದು ಬಾಕಿ ಇರುತ್ತದೆ.

2. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-IIIರ ಯೋಜನೆಯಡಿ 9 ಉಪ ಯೋಜನೆಗಳನ್ನು ಅನುಷ್ಠಾನದ ಮೂಲಕ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ರಾಯಚೂರು, ಕಲಬುರ್ಗಿ, ಯಾದಗಿರಿ, ಕೊಪ್ಪಳ ಮತ್ತು ಗದಗ ಜಿಲ್ಲೆಗಳ 5.94 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲು ಯೋಜಿಸಲಾಗಿದೆ.

3. ಕೃ.ಮೇ.ಯೋ. ಹಂತ-III ರ ಅನುಷ್ಠಾನಕ್ಕೆ ಒಟ್ಟು 1,33,867 ಎಕರೆ ಜಮೀನು ಭೂಸ್ವಾಧೀನದ ಅವಶ್ಯಕತೆ ಇರುತ್ತದೆ.

a)	ಆಲಮಟ್ಟಿ ಆಣೆಕಟ್ಟಿನ ನೀರಿನ ಸಂಗ್ರಹಣಾ ಮಟ್ಟವನ್ನು RL:519.60 M ನಿಂದ RL 524.256 M ವರೆಗೆ ಎತ್ತರಿಸುವುದರಿಂದ ಮುಳುಗಡೆ ಹೊಂದುವ ಜಮೀನು (188 ಗ್ರಾಮಗಳು)	75,563 ಎಕರೆ
b)	ಪುನರ್ವಸತಿ ಕೇಂದ್ರಗಳ ರಚನೆ (20 ಗ್ರಾಮಗಳಿಗೆ) ಮತ್ತು ಬಾಗಲಕೋಟೆ ಪಟ್ಟಣ	6,467 ಎಕರೆ
c)	9 ಉಪ ಯೋಜನೆಗಳ ಕಾಲುವೆ ಜಾಲಗಳ ನಿರ್ಮಾಣಕ್ಕಾಗಿ	51,837 ಎಕರೆ
	ಒಟ್ಟು	**1,33,867 ಎಕರೆ**

ಯೋಜನೆಯಡಿ ಆಲಮಟ್ಟಿ ಜಲಾಶಯದ RL:524.256 ಮೀ. ರವರೆಗಿನ ನೀರಿನ ಸಂಗ್ರಹಣೆ ಅಡಿ ಮುಳುಗಡೆ ಹೊಂದುವ 20 ಗ್ರಾಮಗಳು ಮತ್ತು ಬಾಗಲಕೋಟೆ ಪಟ್ಟಣದ ಭಾಗಶಃ ಪುನರ್ವಸತಿಯನ್ನು ಸಹ ಒಳಗೊಂಡಿದೆ.

4. ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-IIIರ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 51,148.94 ಕೋಟಿಗಳಿಗೆ (2014-15ರ ಸಾಲಿನ ದರಪಟ್ಟಿಯನ್ವಯ) ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಮಾರ್ಚ್-2025ರ ವರೆಗಿನ ಒಟ್ಟು ವೆಚ್ಚ ರೂ.18,861.72 ಕೋಟಿ ಆಗಿರುತ್ತದೆ (ಭೂಸ್ವಾಧೀನ ಮತ್ತು ಪು.&ಪು. ನಿರ್ಮಾಣ ವೆಚ್ಚ ಒಳಗೊಂಡಂತೆ).

5. ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ರಡಿ ಭೂಸ್ವಾಧಿನಕ್ಕೆ ಒಳಪಡುವ ಮುಳುಗಡೆ ಹಾಗೂ ಕಾಲುವೆ ಮತ್ತು ಇತರೆ ಉದ್ದೇಶಗಳಿಗೆ ಬೇಕಾಗುವ ಜಮೀನುಗಳಿಗೆ ಪ್ರತಿ ಎಕರೆ ಒಣ ಭೂಮಿಗೆ ರೂ.20.00 ಲಕ್ಷ ಮತ್ತು ಪ್ರತಿ ಎಕರೆ ನೀರಾವರಿ ಹಾಗೂ ಭಾಗಾಯ್ತು ಭೂಮಿಗೆ ರೂ.24.00 ಲಕ್ಷ ಗರಿಷ್ಟ ಮೊತ್ತದ ಏಕರೂಪ ದರ ನಿಗದಿಪಡಿಸಿ ಒಪ್ಪಂದದ ಐತೀರ್ಪು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ.

6. ಮೇಲೆ ಓದಲಾದ (3)ರಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ಇವರು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ರ ಪರಿಷ್ಕೃತ ಅಂದಾಜು ಮೊತ್ತ ರೂ. 87,818.82 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

7. ದಿನಾಂಕ:16.12.2024 ರಂದು ಬೆಳಗಾವಿಯ ಸುವರ್ಣ ಸೌಧದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮತ್ತು ಮಾನ್ಯ ಉಪಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ರ ಭೂಸ್ವಾಧೀನ ಮತ್ತು ಪುನರ್‌ವಸತಿ & ಪುನರ್ ನಿರ್ಮಾಣಕ್ಕೆ (ಪು. & ಪು.) ಸಂಬಂಧಿಸಿದ ವಿಷಯಗಳ ಕುರಿತು ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸಾರ್ವಜನಿಕ ಪ್ರತಿನಿಧಿಗಳು ಮತ್ತು ಯೋಜನಾ ಬಾಧಿತ ಸಂತ್ರಸ್ಥ (PDFs)ರೊಂದಿಗೆ ಸಭೆ ನಡೆಸಲಾಗಿದ್ದು, ಚರ್ಚೆಯ ನಂತರ ಸಭೆಯಲ್ಲಿ ಕೆಳಕಂಡ ಅಂಶಗಳ ಬಗ್ಗೆ ಪ್ರಮುಖ ನಿರ್ಣಯಗಳನ್ನು ಕೈಗೊಂಡಿದೆ.

(i) 2022ರಲ್ಲಿ ಅಂದಿನ ಸರ್ಕಾರವು ಮುಳುಗಡೆಯಾಗುವ ಜಮೀನನ್ನು ಎರಡು ಹಂತದಲ್ಲಿ ಭೂಸ್ವಾಧೀನಪಡಿಸುವ ನಿರ್ಧಾರ ಕೈಗೊಂಡಿತ್ತು. ಇದನ್ನು ಬದಲಾಯಿಸಿ ಈಗ ಪ್ರಥಮ ಪ್ರಾಶಸ್ತ್ಯದಲ್ಲಿ FRL:519.60 ಮೀ. ದಿಂದ 524.256 ಮೀ. ವರೆಗೆ ಒಂದೇ ಹಂತದಲ್ಲಿ ಜಮೀನು ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ;

(ii) ಮೊದಲ ಆದ್ಯತೆ ಮೇರೆಗೆ ಆಲಮಟ್ಟಿ ಜಲಾಶಯ ಹಿನ್ನೀರಿನಲ್ಲಿ ಮುಳುಗಡೆಯಾಗಲಿರುವ ಭೂಸ್ವಾಧೀನ ಪಡಿಸಿಕೊಳ್ಳಲು ಮತ್ತು ಎರಡನೇ ಆದ್ಯತೆ ಮೇರೆಗೆ ಪುನರ್‌ವಸತಿ ಕೇಂದ್ರಗಳಿಗೆ ಬೇಕಾಗುವ ಜಮೀನು ಭೂಸ್ವಾಧೀನ ನಂತರ ಕಾಲುವೆಗಳಿಗೆ ಬಾಕಿ ಇರುವ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳುವುದು;

(iii) ರೈತರಿಗೆ ಹಾಗೂ ಭೂಮಾಲಿಕರಿಗೆ ನ್ಯಾಯಯುತವಾದ ಭೂಮಿ ಬೆಲೆ ಕೊಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸುವುದು.

8. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-IIIರ ಯೋಜನೆ ಅನುಷ್ಠಾನಕ್ಕೆ ಬೇಕಾಗುವ ಒಟ್ಟು 1,33,867 ಎಕರೆ ಜಮೀನು ಕ್ಷೇತ್ರದಲ್ಲಿ 29,566 ಎಕರೆ ಪ್ರದೇಶಕ್ಕೆ ಅವಾರ್ಡ ಮಾಡಲಾಗಿದ್ದು, ಈ ಪೈಕಿ 28,499 ಎಕರೆ ಜಮೀನುಗಳಿಗೆ ಹೆಚ್ಚಿನ ಭೂಪರಿಹಾರ ಕೋರಿ Trial Court, ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಮತ್ತು ಕಲಬುರಗಿ ಪೀಠ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಗಳಲ್ಲಿ ಒಟ್ಟು 28,338 ಪ್ರಕರಣಗಳು ದಾಖಲಾಗಿರುತ್ತವೆ.

9. ಯೋಜನೆಯ ಜಮೀನುಗಳಿಗೆ ಹೆಚ್ಚಿನ ಭೂಪರಿಹಾರ ಕೋರಿ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಹಿನ್ನೆಲೆಯಲ್ಲಿ ಮತ್ತು ಪ್ರಮುಖವಾಗಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ರೈತರು/ಭೂಮಾಲಿಕರು ಭೂಸ್ವಾಧೀನತೆಗಾಗಿ ಒಪ್ಪಂದದ ದರಗಳ ಪರಿಷ್ಕರಣೆಗೆ ಕೋರುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ದಿನಾಂಕ:26.08.2025 ಮತ್ತು ದಿನಾಂಕ:03.09.2025 ರಂದು UKP ಯೋಜನಾ ಪ್ರದೇಶದ ವ್ಯಾಪ್ತಿಯ ಸಚಿವರುಗಳು, ಶಾಸಕರು ರೈತರು, ಸ್ಥಳಿಯ ಮುಖಂಡರುಗಳೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಸಭೆಯನ್ನು ಜರುಗಿಸಿ ಅವರುಗಳ ಅಭಿಪ್ರಾಯಗಳ ಕುರಿತು ಚರ್ಚೆ ಕೈಗೊಂಡಿರುತ್ತಾರೆ.

ಸದರಿ ಸಭೆಯಲ್ಲಿ ಮುಳುಗಡೆಯಾಗುವ ಭೂಮಿಗೆ ಎಕರೆಗೆ ರೂ.40.00 ಲಕ್ಷದವರೆಗಿನ ಪರಿಹಾರ ದರಗಳನ್ನು ನಿಗದಿಪಡಿಸುವುದು ಮತ್ತು ಕಾಲುವೆ ಭೂಸ್ವಾಧಿನಕ್ಕೆ ತುಲನಾತ್ಮಕವಾಗಿ ಕಡಿಮೆ ದರಗಳನ್ನು ನಿಗದಿಪಡಿಸುವ ಬಗ್ಗೆ ರೈತರು ಮತ್ತು ಸ್ಥಳೀಯ ಮುಖಂಡರುಗಳು ವಿನಂತಿಸಿರುತ್ತಾರೆ.

10. ಮಾನ್ಯ ಮುಖ್ಯಮಂತ್ರಿಯವರು ದಿನಾಂಕ:10.09.2025ರಂದು ಯೋಜನಾ ಪ್ರದೇಶದ ವ್ಯಾಪ್ತಿಯ ಸಚಿವರುಗಳು, ಶಾಸಕರು, ಸ್ಥಳೀಯ ಮುಖಂಡರುಗಳೊಂದಿಗೆ ಸಭೆಯನ್ನು ಜರುಗಿಸಿರುತ್ತಾರೆ. ಸದರಿ ಸಭೆಯಲ್ಲಿ ವಿಶೇಷವಾಗಿ ಮುಳುಗಡೆಯಾಗುವ ಭೂಮಿಗೆ ಒಪ್ಪಂದ ಐತೀರ್ಪು ದರಗಳ (Consent Award Rates) ಪರಿಷ್ಕರಣೆ, ನೇರ ಖರೀದಿ/ಒಪ್ಪಂದ ದರಗಳಲ್ಲಿ ಭೂಪರಿಹಾರ ಪಾವತಿ, ಅಸ್ತಿತ್ವದಲ್ಲಿರುವ ಭೂಸ್ವಾಧೀನ ಪ್ರಕರಣಗಳ ವಿಲೇವಾರಿ ಮತ್ತು ಸಂಬಂಧಿತ ವಿಷಯಗಳ ಕುರಿತು ವಿವರವಾಗಿ ಚರ್ಚಿಸಲಾಗಿರುತ್ತದೆ.

11. 2025-26 ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಗಿನಂತೆ ಘೋಷಿಸಲಾಗಿರುತ್ತದೆ.

> "ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ವ್ಯಾಪ್ತಿಯ ಆಲಮಟ್ಟಿ ಅಣೆಕಟ್ಟಿನ ಗೇಟನ್ನು 524.256 ಮೀಟರ್‌ವರೆಗೆ ಎತ್ತರಿಸುವುದರಿಂದ ಮುಳುಗಡೆಯಾಗುವ ಜಮೀನುಗಳನ್ನು ಒಪ್ಪಂದ ಐತೀರ್ಪಿನ (Consent Award) ಮುಖಾಂತರ ಒಂದೇ ಹಂತದಲ್ಲಿ ಭೂಸ್ವಾಧೀನಪಡಿಸಿಕೊಂಡು ರೈತರಿಗೆ ಪರಿಹಾರ ವಿತರಣೆಗೆ ಕ್ರಮವಹಿಸಲಾಗುವುದು. ಅಲ್ಲದೇ, 2.01 ಲಕ್ಷ ಎಕರೆ ನೀರಾವರಿ ಸಾಮರ್ಥ್ಯ ಕಲ್ಪಿಸುವ ಬಾಕಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು."

12. ಭೂಸ್ವಾಧೀನತೆ ಪ್ರಸ್ತುತ ಸ್ಥಿತಿಗತಿ :

(ಕ್ಷೇತ್ರ ಎಕರೆಗಳಲ್ಲಿ)

ಭೂಸ್ವಾಧೀನ ವಿವರ	ಒಟ್ಟು ಅವಶ್ಯವಿರುವ ಜಮೀನು	ಐತೀರ್ಪು ಹೊರಡಿಸಲಾದ ಕೇತ್ರ	ನ್ಯಾಯಾಲಯದ ಪ್ರಕರಣಗಳಲ್ಲಿನ ಕೇತ್ರ	ಭೂಸ್ವಾಧೀನದ ವಿವಿಧ ಹಂತದಲ್ಲಿನ ಕೇತ್ರ			ಬಾಕಿ ಭೂಸ್ವಾಧಿನ ಕೇತ್ರ
				ಅಧಿಸೂಚನೆ ಹೊರಡಿಸಲಾದ ಕೇತ್ರ	11(1) ರಿಂದ ಐತೀರ್ಪಿನವರೆಗಿನ ವಿವಿಧ ಹಂತದ ಕೇತ್ರ	ಒಟ್ಟು	
1	2	3	4	5	6	7	8
ಮುಳುಗಡೆ ಪ್ರದೇಶ	75,563	2,543	2,211	4,965	24,603	29,568	43,452
ಪುನರ್ವಸತಿ ಕೇಂದ್ರ ನಿರ್ಮಾಣ	6,467	3,392	1,846	528	2076	2,604	471
ಕಾಲುವೆ ಜಾಲ ನಿರ್ಮಾಣ	51,837	23,631	22,896	2,215	10,560	12,775	15,431
ಒಟ್ಟು	1,33,867	29,566	28,499 (*)	7,708	37,239	44,947	59,354

(*) ವಿವಿಧ ನ್ಯಾಲಯಗಳಲ್ಲಿ (Trail Court/ High Court, Dharwar/Kalburgi Bench & Supreme Court) ಬಾಕಿ ಇರುವ ಪ್ರಕರಣಗಳಲ್ಲಿಯ ಕೇತ್ರ.

13. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-IIIರ ಭೂಸ್ವಾಧೀನತೆಗೆ ಈ ಕೆಳಕಂಡ ವಿವಿಧ ಸನ್ನಿವೇಶಗಳ ಒಪ್ಪಂದ ಐತೀರ್ಪಿನನ್ವಯ ಪ್ರಸ್ತಾವನೆಯನ್ನು ಸಚಿವ ಸಂಪುಟದ ನಿರ್ಧಾರಕ್ಕಾಗಿ ಮಂಡಿಸಲಾಗಿರುತ್ತದೆ.

	ಭೂಸ್ವಾಧೀನ ಮೊತ್ತ ರೂ.ಕೋಟಿಗಳಲ್ಲಿ		
	ಸನ್ನಿವೇಶ - 1	ಸನ್ನಿವೇಶ - 2	ಸನ್ನಿವೇಶ – 3
ದಿನಾಂಕ:09.10.2017 ರ ಆದೇಶ ರನ್ವಯ ಭೂಸ್ವಾಧೀನಕ್ಕಾಗಿ ಅನುಮೋದಿಸಿದ ಮೊತ್ತ	ಅನುಮೋದಿತ ಒಪ್ಪಂದದ ಐತೀರ್ಪಿನ ದರಗಳನ್ವಯ ಒಣ ಭೂಮಿಗೆ ರೂ.20 ಲಕ್ಷ/ಎಕರೆ & ಭಾಗಾಯ್ತು ಭೂಮಿಗೆ ರೂ.24 ಲಕ್ಷ/ಎಕರೆ. (ಸರ್ಕಾರದ ಆದೇಶ ಸಂಖ್ಯೆ RD 24 AQV 2022 ದಿನಾಂಕ:25.01.2023 ರ ಪ್ರಕಾರ)	ಸಂಭಾವ್ಯ ಒಪ್ಪಂದದ ಐತೀರ್ಪಿನ ದರಗಳನ್ವಯ, ಒಣ ಭೂಮಿಗೆ ರೂ.25 ಲಕ್ಷ/ಎಕರೆ & ಭಾಗಾಯ್ತು ಭೂಮಿಗೆ ರೂ.30 ಲಕ್ಷ/ಎಕರೆ.	ಸಂಭಾವ್ಯ ಒಪ್ಪಂದದ ಐತೀರ್ಪಿನ ದರಗಳನ್ವಯ, ಒಣ ಭೂಮಿಗೆ ರೂ.30 ಲಕ್ಷ/ಎಕರೆ & ಭಾಗಾಯ್ತು ಭೂಮಿಗೆ ರೂ.35 ಲಕ್ಷ/ಎಕರೆ.
17,627.00	40,557.09 (*)	44,802.45 (*)	48,744.57 (*)

ಟಿಪ್ಪಣಿ (*): ಇದು existing EP & LAC ಪ್ರಕರಣಗಳ ರೂ. 11,757.00 ಕೋಟಿ ಮೊತ್ತವನ್ನು ಒಳಗೊಂಡಿದೆ.

14. ಮೇಲೆ ಓದಲಾದ (4) & (5)ರಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ಇವರು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-IIIರ ಯೋಜನೆಯ ಸಂಭಾವ್ಯ ಪರಿಷ್ಕೃತ ಮೊತ್ತದ ಕುರಿತು ಭೂಸ್ವಾಧೀನಕ್ಕಾಗಿ ನಿರ್ಧರಿಸಬೇಕಾದ ವಿವಿಧ ಸನ್ನಿವೇಶಗಳ ಒಪ್ಪಂದದ ದರಗಳ ರನ್ವಯ ಈ ಕೆಳಗಿನಂತೆ ವರದಿ ಮಾಡಿರುತ್ತಾರೆ:

(ರೂ. ಕೋಟಿ ಗಳಲ್ಲಿ)

	ಕೃ.ಮೇ.ಯೋ. ಹಂತ-III ರ ಪರಿಷ್ಕೃತ ಅಂದಾಜು ಮೊತ್ತ (ವಿವಿಧ ಸನ್ನಿವೇಶಗಳ – ಒಪ್ಪಂದದ ಐತೀರ್ಪು ದರಗಳು)		
ಕೃ.ಮೇ.ಯೋ. ಹಂತ-III ರ ಹಿಂದಿನ ಅನುಮೋದಿತ ಮೊತ್ತ ದಿನಾಂಕ:09.10.2017 ರ ಆದೇಶದ ಪ್ರಕಾರ (2014-15 PL)	ಅನುಮೋದಿತ ಒಪ್ಪಂದದ ಐತೀರ್ಪಿನ ದರಗಳನ್ವಯ ಖುಷ್ಕಿ (ಒಣ) ಭೂಮಿಗೆ ರೂ.20 ಲಕ್ಷ/ಎಕರೆ ಮತ್ತು ತರಿ (ಭಾಗಾಯ್ತು) ಭೂಮಿಗೆ ರೂ.24 ಲಕ್ಷ/ಎಕರೆ. (ಸರ್ಕಾರದ ಆದೇಶ ಸಂಖ್ಯೆ RD 24 AQV 2022 ದಿನಾಂಕ:25.01.2023 ರ ಪ್ರಕಾರ)	ಸಂಭಾವ್ಯ ಒಪ್ಪಂದದ ಐತೀರ್ಪಿನ ದರಗಳನ್ವಯ, ಖುಷ್ಕಿ (ಒಣ) ಭೂಮಿಗೆ ರೂ.25 ಲಕ್ಷ/ಎಕರೆ ಮತ್ತು ತರಿ (ಭಾಗಾಯ್ತು) ಭೂಮಿಗೆ ರೂ.30 ಲಕ್ಷ/ಎಕರೆ.	ಸಂಭಾವ್ಯ ಒಪ್ಪಂದದ ಐತೀರ್ಪಿನ ದರಗಳನ್ವಯ, ಖುಷ್ಕಿ (ಒಣ) ಭೂಮಿಗೆ ರೂ.30 ಲಕ್ಷ/ಎಕರೆ ಮತ್ತು ತರಿ (ಭಾಗಾಯ್ತು) ಭೂಮಿಗೆ ರೂ.35 ಲಕ್ಷ/ಎಕರೆ.
51,148.94	87,818.82	92,064.18	96,006.30

15. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ಅಡಿಯಲ್ಲಿ ಭೂಸ್ವಾಧೀನ ಸಮಸ್ಯೆಗಳ ಕುರಿತು ಕಾನೂನು ಕಾರ್ಯತಂತ್ರದ ಬಗ್ಗೆ ಮಾನ್ಯ ಅಡ್ವೊಕೇಟ್ ಜನರಲ್ ರವರ ಅಭಿಪ್ರಾಯ, ಆರ್ಥಿಕ ಹಾಗೂ ಕಂದಾಯ ಇಲಾಖೆಗಳ ಅಭಿಪ್ರಾಯಗಳನ್ನು ಪಡೆಯಲಾಗಿದೆ.

16. ಆರ್ಥಿಕ ಇಲಾಖೆಯು ಪ್ರಮುಖವಾಗಿ ಕೃ.ಮೇ.ಯೋ. ಹಂತ-3ಕ್ಕೆ ಸಂಬಂಧಿಸಿದಂತೆ ಭೂಪರಿಹಾರ ಹಾಗೂ ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾರ್ಯಕ್ರಮಗಳಿಗಾಗಿ ಮುಂದಿನ ನಾಲ್ಕು ವರ್ಷಗಳಲ್ಲಿ ಒದಗಿಸಬೇಕಾದ ಹೆಚ್ಚುವರಿ ಅನುದಾನವನ್ನು ಸುಮಾರು 75,000 ಕೋಟಿ

ರೂ.ಗಳೆಂದು ಅಂದಾಜಿಸಲಾಗಿದೆ. ಅಂದರೆ ಪ್ರತಿ ವರ್ಷ ಸುಮಾರು 18000 ಕೋಟಿ ರೂ.ಗಳನ್ನು ಒದಗಿಸಬೇಕಾಗುತ್ತದೆ ಎಂದು ಅಭಿಪ್ರಾಯಿಸಿದೆ.

17. ಮಾನ್ಯ ಅಡ್ವೊಕೇಟ್ ಜನರಲ್ ರವರು ಹೊಸ ಭೂಸ್ವಾಧೀನ ಕಾಯ್ದೆ -2013 ರನ್ವಯ "Land Acquisition, Rehabilitation and Resettlement Authority" ರಚಿಸಲು ಪ್ರಸ್ತಾಪಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಜಸಂಇ 93 ಕೆಬಿಎನ್ 2025, ಬೆಂಗಳೂರು, ದಿನಾಂಕ: 09.10.2025

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ, ಒಪ್ಪಂದದ ಐತೀರ್ಪು ದರಗಳು ಹಾಗೂ ಸಂಬಂಧಿಸಿದ ಇನ್ನಿತರೆ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಈ ಕೆಳಗಿನಂತೆ ಅನುಮೋದನೆ ನೀಡಿದೆ.

I. ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ 75,563 ಎಕರೆ ಮುಳುಗಡೆಯಾಗುವ ಭೂಮಿಗಾಗಿ RL:519.60 ಮೀ. ನಿಂದ RL:524.256 ಮೀ. ವರೆಗೆ ಒಂದೇ ಹಂತದಲ್ಲಿ ಒಪ್ಪಂದದ ದರ ಅಥವಾ ಭೂ ಖರೀದಿ ಮುಖಾಂತರ ಭೂಸ್ವಾಧೀನ ಮಾಡಲು;

II. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ಯೋಜನೆಗೆ ಅಗತ್ಯವಿರುವ ಮುಳುಗಡೆ ಜಮೀನು ಮತ್ತು ಕಾಲುವೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ನಿಗದಿಪಡಿಸಿದ ಒಪ್ಪಂದದ ಐತೀರ್ಪು ದರಗಳು (Consent Award rates) :

a) <u>ಮುಳುಗಡೆ ಜಮೀನುಗಳ ಭೂಸ್ವಾಧೀನತೆಗಾಗಿ</u>:

ಖುಷ್ಕಿ(ಒಣ) ಭೂಮಿಗೆ (Dry Land) - ರೂ.30.00 ಲಕ್ಷ ಪ್ರತಿ ಎಕರೆ.
ತರಿ ಜಮೀನಿಗೆ (Wet Land) - ರೂ.40.00 ಲಕ್ಷ ಪ್ರತಿ ಎಕರೆ.

b) <u>ಕಾಲುವೆ ಜಮೀನುಗಳ ಭೂಸ್ವಾಧೀನತೆಗಾಗಿ</u>:

ಖುಷ್ಕಿ(ಒಣ) ಭೂಮಿಗೆ (Dry Land) - ರೂ.25.00 ಲಕ್ಷ ಪ್ರತಿ ಎಕರೆ.
ತರಿ ಜಮೀನಿಗೆ (Wet Land) - ರೂ.30.00 ಲಕ್ಷ ಪ್ರತಿ ಎಕರೆ.

III. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ಯೋಜನೆಗೆ ಅಗತ್ಯವಿರುವ ಮುಳುಗಡೆ ಹೊಂದುವ ಮತ್ತು ಇತರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ನೇರ ಖರೀದಿ / ಒಪ್ಪಂದ ದರ (Direct Purchase/Consent Award) ಮೂಲಕ ಭೂಪರಿಹಾರವನ್ನು ಪಾವತಿಸಲು ಜಲ ಸಂಪನ್ಮೂಲ ಇಲಾಖೆ ಮಾರ್ಗಸೂಚಿ/ ನಿಯಮಾವಳಿಗಳನ್ನು ರೂಪಿಸುವುದು; ಮತ್ತು ಈ ಕುರಿತಾಗಿ ಜಲಸಂಪನ್ಮೂಲ ಇಲಾಖೆ ಕಂದಾಯ ಇಲಾಖೆಯೊಂದಿಗೆ ಸಮಾಲೋಚಿಸಿ ಪ್ರತ್ಯೇಕ ಆದೇಶವನ್ನು ಹೊರಡಿಸುವುದು;

IV. ಲೋಕ ಅದಾಲತ್ ಮತ್ತು Mediation ಮೂಲಕ ನ್ಯಾಯಾಲಯದ ಪ್ರಕರಣಗಳ ಇತ್ಯರ್ಥಕ್ಕಾಗಿ ನ್ಯಾಯಾಲಯದಲ್ಲಿ ಪರಿಣಾಮಕಾರಿಯಾಗಿ ಕ್ರಮವಹಿಸಲು ಆಯುಕ್ತರು, ಭೂಸ್ವಾಧೀನ, ಮತ್ತು ಪು.&ಪು. ಬಾಗಲಕೋಟ ಹಾಗೂ ರಾಜ್ಯ ಕಾನೂನು ತಂಡ ಕ್ರಮ ವಹಿಸುವುದು;

V. ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಹೊಸ ಭೂಸ್ವಾಧೀನ ಕಾಯ್ದೆ - 2013 ರ ಸೆಕ್ಷನ್ 23(A) ಮತ್ತು 30(A) ಅಡಿಯಲ್ಲಿ ಸೂಕ್ತವಾಗಿ Consent

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

Award/Voluntary Award ಮೂಲಕ ಕೈಗೊಳ್ಳಲು ಆಯುಕ್ತರು, ಭೂಸ್ವಾಧೀನ, ಮತ್ತು ಪು. ಮತ್ತು ಪು. ಬಾಗಲಕೋಟ ರವರು ಕ್ರಮ ವಹಿಸುವುದು;

VI. ಯೋಜನೆ ಅಡಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ಪರಿಹಾರ ಪ್ಯಾಕೇಜ್ ನೀಡಲು ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಪರ್ಯಾಯ ನೀತಿಯನ್ನು ರೂಪಿಸಲು ಆಯುಕ್ತರು, ಭೂಸ್ವಾಧೀನ, ಮತ್ತು ಪು. ಮತ್ತು ಪು. ಬಾಗಲಕೋಟ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕೃ.ಭಾ.ಜ.ನಿ. ರವರು ಕ್ರಮ ವಹಿಸುವುದು; ಹಾಗೂ ರೂಪಿಸಲಾದ ಪರ್ಯಾಯ ನೀತಿಯನ್ನು ಜಲಸಂಪನ್ಮೂಲ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸುವುದು;

VII. The Right To Fair Compensation and Transparency in Land Acquisition, Rehabilitation and Resettlement Act, 2013 (RFCTLARR Act, 2013) ರ Section 51ರ ಅನ್ವಯ "Land Acquisition, Rehabilitation and Resettlement Authority" ರಚಿಸಲು ಮತ್ತು ಇದಕ್ಕಾಗಿ ಅಧಿಕಾರಿಯನ್ನು ನೇಮಿಸಲು ಕಂದಾಯ ಇಲಾಖೆ ಹಾಗೂ ಕಾನೂನು ಇಲಾಖೆ ಕ್ರಮ ವಹಿಸುವುದು;

VIII. ಆಯುಕ್ತರು, ಭೂಸ್ವಾಧೀನ ಮತ್ತು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ, ಕೃ.ಮೇ.ಯೋ., ಬಾಗಲಕೋಟೆ ಹುದ್ದೆಗೆ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕ್ರಮ ವಹಿಸುವುದು.

2. ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆಯಡಿಯ ಭೂಸ್ವಾಧೀನ ಮತ್ತು ಪುನರ್ವಸತಿ ಹಾಗೂ ಪುನರ್ ನಿರ್ಮಾಣ ಕಾರ್ಯಕ್ರಮಕ್ಕೆ ಅಗತ್ಯವಿರುವ ಹೆಚ್ಚುವರಿ ಸುಮಾರು ರೂ. 75,000 ಕೋಟಿ ಮೊತ್ತವನ್ನು ಮುಂದಿನ ನಾಲ್ಕು ವರ್ಷಗಳಲ್ಲಿ ಭರಿಸಲು ಸುಮಾರು ರೂ.18000 ಕೋಟಿ ವಾರ್ಷಿಕ ಅನುದಾನವನ್ನು ಜಲಸಂಪನ್ಮೂಲ ಇಲಾಖೆಗೆ ಆಯ್ಯವ್ಯಯದಲ್ಲಿ ಸೂಕ್ತವಾಗಿ ಕಲ್ಪಿಸುವುದು.

3. ಈ ಆದೇಶವನ್ನು ದಿನಾಂಕ:16.09.2025ರ ಸಚಿವ ಸಂಪುಟದ ಸಭೆಯ ಪ್ರಕರಣ ಸಂಖ್ಯೆ ಸಿ: 774/2025 ರಲ್ಲಿ ನೀಡಿರುವ ನಿರ್ಣಯದನ್ವಯ ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿಗಳ ಸಂಖ್ಯೆ: ಆಇ 183 ಆಕೋ-1/2025 ದಿನಾಂಕ:15.09.2025 & 06.102025, ಕಂದಾಯ ಇಲಾಖೆಯ ಇ-ಆಫೀಸ್ ಹಿಂಬರಹ ದಿನಾಂಕ:14.09.2025 ಹಾಗೂ ಮಾನ್ಯ ಅಡ್ವೊಕೇಟ್ ಜನರಲ್ ರವರು ಕಡತ ಸಂಖ್ಯೆ: WRD 93 KBN 2025 (PART-3), ದಿನಾಂಕ:15.09.2025ರಲ್ಲಿ ನೀಡಿರುವ ಅಭಿಪ್ರಾಯಗಳ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿಜಯಲಕ್ಷ್ಮಿ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5),
ಜಲ ಸಂಪನ್ಮೂಲ ಇಲಾಖೆ.

PR-231

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

MADESHWARA NARASIMHA MURTHY JAYASIMHA